# ಬಹುರಾಷ್ಟ್ರೀಯ ಕಂಪನಿಗಳ ಭಿಕ್ಷೆ ಬೇಡ

■ ವಿಕ ಸುದ್ದಿಲೋಕ ಗುಲ್ಬರ್ಗ

ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ನಡೆಸುವ ಸಂಶೋಧನೆಯಲ್ಲಿ ರೈತರ ಸಲಹೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಇಲ್ಲಿ ನಡೆದ ರೈತರ ದುಂಡು ಮೇಜಿನ ಸಭೆ ಆಗ್ರಹಿಸಿದೆ.

ಬೆಂಗಳೂರಿನಲ್ಲಿ ನಡೆದ ರೈತ ತೀರ್ಪು ಕಾರ್ಯಕ್ರಮದಲ್ಲಿ ಬಂದ ತೀರ್ಪುಗಳ ಅನುಷ್ಠಾನ ಸಾಧ್ಯತೆಗಳ ಕುರಿತು ನಗರದಲ್ಲಿ ನಡೆದ ರೈತರ ಸಭೆಯಲ್ಲಿ ಸಂಶೋಧನೆಗಳ ನಾನಾ ಮುಖಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ರೈತ ಸಂಘಟನೆಗಳ ಮುಖಂಡರು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರೈತರು ಸೇರಿದಂತೆ 40 ಜನಪಾಲ್ಗೊಂಡಿದ್ದರು.

ಕೃಷಿ ವಿಶ್ವವಿದ್ಯಾಲಯಗಳ ಚಟುವಟಿಕೆಗಳಿಗೆ ಬಹುರಾಷ್ಟ್ರೀಯ ಕಂಪನಿಗಳಿಂದ ಧನಸಹಾಯ ಪಡೆಯಬಾರದು ಎಂದು ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಬಸವರಾಜ ತಂಬಾಕೆ ಒತ್ತಾಯಿಸಿದರು. ದೇಶದ ಶೇ.70ರಷ್ಟು ಜನರು ಕೃಷಿಯನ್ನೇ ಅವಲಂಬಿತವಾಗಿದ್ದರೂ ಸಂಸತ್ತು ಅಥವಾ ವಿಧಾನಸಭೆಯಲ್ಲಿ ಕೃಷಿಕರಿಗೆ ಆದ್ಯತೆ ಸಿಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ತೊಗರಿ ಬೆಳೆಗಾರರ ಸಂಘದ ಅಧ್ಯಕ್ಷ ಬಸವರಾಜ ಇಂಗಿನ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಾಗ ರೈತರ ಜತೆ ಸಮಾಲೋಚಿಸಿಯೇ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಆದರ್ಶದ ದಕ್ಷಿಣ ಏಷ್ಯಾ ಸಂಚಾಲಕ ಪಿ.ವಿ.ಸತೀಶ್ ಪ್ರಾಸ್ತಾವಿಕ ಮಾತನಾಡಿ, ರೈತರ ಬೇಕು-ಬೇಡಗಳತ್ತ ಗಮನ ಹರಿಸದೇ ನಡೆಯುತ್ತಿರುವ ಸಂಶೋಧನೆಗಳು ಕೃಷಿ ಕ್ಷೇತ್ರದ ಬಿಕ್ಕಟ್ಟಿಗೆ ಕಾರಣವಾಗಿವೆ. ಈ ಹಿನ್ನೆಲೆಯಲ್ಲಿ ರೈತರ ಧ್ವನಿಗೆ ವೇದಿಕೆ ಕಲ್ಪಿಸಿದ್ದು ರೈತ ತೀರ್ಪು ಕಾರ್ಯಕ್ರಮ ಎಂದರು.


ಗುಲ್ಬರ್ಗದಲ್ಲಿ ನಡೆದ ರೈತರ ದುಂಡು ಮೇಜಿನ ಸಭೆಯಲ್ಲಿ ಬಸವರಾಜ ತಂಬಾಕೆ ಮೊದಲಾದವರು ಪಾಲ್ಗೊಂಡಿದ್ದರು.

ರೈತ ಕೃಷಿ ಕೂಲಿಕಾರರ ಸಂಘದ ಮುಖಂಡ ವಿ.ಜಿ. ದೇಸಾಯಿ, ರೈತ ಸಂಘದ ವಿಶ್ವನಾಥ ಪಾಟೀಲ, ಸಿದ್ರಾಮಪ್ಪ ದೇವೇಂದ್ರಪ್ಪ ಬೋಯಿ, ರಾಚರೆಡ್ಡಿ ಮಾತನಾಡಿದರು.

ನಿರ್ಣಯಗಳು: ಜಗತ್ತಿನಲ್ಲಿ ಮೊದಲ ಬಾರಿಗೆ ನಡೆದ ರೈತ ತೀರ್ಪು ಕಾರ್ಯಕ್ರಮದಲ್ಲಿ ಧ್ವನಿವಂಚಿತ, ಬುಡಕಟ್ಟು, ದಲಿತ ವರ್ಗದ ಸಣ್ಣ ರೈತರು ತಮಗೆ ಎಂಥ ಸಂಶೋಧನೆ ಬೇಕು ಎಂಬ ತೀರ್ಪು ಅನುಷ್ಠಾನ ಮಾಡಲು ಗ್ರಾಮ ಮಟ್ಟದಲ್ಲಿ ಚರ್ಚಿಸಬೇಕು. ಕೃಷಿ ಸಂಶೋಧಕರು ರೈತರ ಅಭಿಪ್ರಾಯಕ್ಕೆ ಆದ್ಯತೆ ನೀಡಬೇಕು ಎಂಬಿತ್ಯಾದಿ 10 ನಿರ್ಣಯಗಳನ್ನು ಅಂಗೀಕರಿಸಲಾಯಿತು.



## ದಿನ ಭವಿಷ್ಯ

ದೈವಜ್ಞ ಕೆ.ಎನ್. ಸೋಮಯಾಜಿ

ಮೇಷ: ಅನಿರೀಕ್ಷಿತ ಪ್ರಯಾಣವು ಹೊಸ ಬದುಕಿನ ದಾರಿಗೆ ಕಾರಣವಾಗಲಿದೆ. ವಾತ್ಸಲ್ಯ ತೋರುವ ಮಂದಿ ನಿಮ್ಮೊಂದಿಗಿದ್ದಾರೆಂಬುದು ಇಂದು ನಿಮ್ಮ ಆತ್ಮವಿಶ್ವಾಸ ಹೆಚ್ಚಲು ಕಾರಣವಾಗಲಿದೆ.

ವೃಷಭ: ಹೊಸ ಜನರೊಡನೆ ತೋರುವ ಆತ್ಮೀಯತೆಯಿಂದಾಗಿ ಮುಂದಿನ ಜೀವನದಲ್ಲಿ ಒಳ್ಳೆಯ ಗುರಿ ತಲುಪುವಿರಿ. ತಾಳ್ಮೆ ಮತ್ತು ವಿಶ್ವಾಸದಿಂದಾಗುವ ಲಾಭವು ನಿಮಗೆ ಚೆನ್ನಾಗಿಯೆ ತಿಳಿಯಲಿದೆ.

ಮಿಥುನ: ಜೀವನ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ನಿಮಗಿದೆ. ತಿಳಿ ಮನಸ್ಸಿನಿಂದ ಆಲೋಚಿಸಿ. ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇದೆ.

ಕರ್ಕಾಟಕ: ಹೊಸ ಉದ್ಯಮ ಅಥವಾ ವ್ಯಾಪಾರ ಪ್ರಾರಂಭಿಸುವ ಯೋಚನೆ ಇಂದು ನಿಮ್ಮ ಮುಖ್ಯ ವಿಷಯವಾಗಲಿದೆ. ಹೆಂಡತಿಯ ಸಹಕಾರ ಅಗತ್ಯವೆನಿಸಲಿದೆ.

ಸಿಂಹ: ನೀವು ವೈಯುಕ್ತಿಕವಾಗಿ ಎಷ್ಟು ಹಣ ಗಳಿಸಬಹುದೆಂದು ಲೆಕ್ಕಾಚಾರ ಹಾಕುವುದಕ್ಕಿಂತ ಬಂಡವಾಳ ಕಾಯ್ದುಕೊಳ್ಳುವುದರತ್ತ ಗಮನ ಹರಿಸಿ. ಪಾಲುದಾರರ ಮಾತಿನಲ್ಲಿ ವಿಶ್ವಾಸವಿಡಿ.

ಕನ್ಯಾ: ಇಂದಿನಿಂದ ಮುಂದಾಳತ್ವ ವಹಿಸಿಕೊಳ್ಳಲು ಹಿಂಜರಿಕೆ ಬೇಡ. ಯೋಜನೆಯಂತೆ ಕೆಲಸಗಳು ನಡೆಯುವ ಎಲ್ಲಾ ಸಾಧ್ಯತೆಗಳು ಇವೆ. ಊಹೆಗೂ ಮೀರಿದ ಲಾಭ.

ತುಲಾ: ವ್ಯವಹಾರದ ವಿಷಯಗಳಲ್ಲಿ ಸಂಬಂಧಗಳಿಗೆ ಆಸ್ಪದವಿರದಂತೆ ನೋಡಿಕೊಳ್ಳಿ. ಮೌಲ್ಯಗಳಿಗೆ ಬೆಲೆ ಕೊಡುವ ನಿಮಗೆ ಹಣಕಾಸಿನ ಸಂಗತಿಗಳು ಅಪ್ರಿಯವಾಗಿರುವುದಿಲ್ಲ.

ವೃಶ್ಚಿಕ: ಹೊಸ ಪ್ರೋಜೆಕ್ಟ್‌ಗಳ ಬಗ್ಗೆ ಹಿರಿಯ ಅಧಿಕಾರಿಗಳೊಡನೆ ಚರ್ಚಿಸಿ. ಅವರ ಸಲಹೆ ಸೂಚನೆಗಳಿಂದ ಲಾಭ ಪಡೆಯುವಿರಿ. ಹಿರಿಯರ ಆಶೀರ್ವಾದ ಲಭಿಸುವುದು.

ಧನುಸ್ಸು: ಪ್ರವಾಸಿ ತಾಣವೊಂದರಲ್ಲಿ ಕಟ್ಟಡದ ನಿರ್ಮಾಣಕ್ಕೆ ಸೂಕ್ತ ಸ್ಥ